## ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿಂದುನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದ ವರದಿ

**ವಿಷಯ :– 21 ನೇ ಶತಮಾನದ ಕಲಿಕಾರ್ಥಿಯ ಪ್ರತಿಭೆಯನ್ನು ಪೋಷಿಸುವವಲ್ಲಿ ಶಿಕ್ಷಕರ ಶಿಕ್ಷಣದ ದೃಷ್ಟಿಕೋನ**
**ದಿನಾಂಕ :– 30.3.2022**

1. ಪೂರ್ವಭಿಮುಖವಾಗಿ ಪಟ್ಟಣದ ಆಯಕಟ್ಟಿನ ಸ್ಥಳಗಳಲ್ಲಿ ವಿಚಾರ ಸಂಕಿರಣದ ಕುರಿತಂತ ಸೂಚನಾ ಫಲಕಗಳನ್ನು ಹಾಕಲಾಗಿತ್ತು.
2. ಒಂದು ದಿನ ಮುಂಚಿತವಾಗಿಯೇ ಬಂದಿದ್ದ ಅತಿಥಿಗಳಿಗೆ ಉಳಿದುಕೊಳ್ಳಲು ವಿಶ್ರಾಂತಿ ಗೃಹಗಳನ್ನು ಪ್ರತಿನಿಧಿಗಳ ಅಪೇಕ್ಷೆಯ ಮೇರೆಗೆ ಕಾಲೇಜಿನ ವತಿಯಿಂದ ಏರ್ಪಡಿಸಲಾಗಿತ್ತು.
3. ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಉಪನ್ಯಾಸಕರು ಹಾಗೂ ಪ್ರಶಿಕ್ಷಣಾರ್ಥಿಗಳನ್ನೊಳಗೊಂಡ ಹಲವು ಸಮಿತಿಗಳನ್ನು ರಚಿಸಿ, ಪ್ರತಿಯೊಂದು ಸಮಿತಿಗೂ ಉಪನ್ಯಾಸಕಕರನ್ನು ನೇಮಿಸಲಾಗಿದ್ದು, ಅವರ ಮಾರ್ಗದರ್ಶನದಲ್ಲಿ ಪ್ರಶಿಕ್ಷಣಾರ್ಥಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿದರು.

**ನೋಂದಣಿ:–**

ರಾಷ್ಟ್ರೀಯ ವಿಚಾರ ಸಂಕಿರಣವು ಬೆಳಗ್ಗೆ 9 ಗಂಟೆಗೆ ನೋಂದಣಿ ಪ್ರಕ್ರಿಯೆಯಿಂದ ಪ್ರಾರಂಭವಾಯಿತು. 198 ಪ್ರತಿನಿಧಿಗಳ, ಶಿಕ್ಷಣ ತಜ್ಞರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ತಮ್ಮ ನವೀನ ಆಲೋಚನೆಗಳನ್ನು ಮಂಡಿಸಲು ಹಾಗೂ ಭಾಗವಹಿಸಲು ಮೊದಲೇ ಆನ್ಲೈನ್ ಮೂಲಕ ನೋಂದಾಯಿಸಿದರು. ಪ್ರತಿನಿಧಿಗಳಿಗೆ ಹಾಗೂ ಆಹ್ವಾನಿತ ಗಣ್ಯರಿಗೆ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.






**ಉದ್ಘಾಟನಾ ಸಮಾರಂಭ:**

10:45 ಕ್ಕೆ ಉದ್ಘಾಟನಾ ಕಾರ್ಯಕ್ರಮ ಪ್ರಾರಂಭವಾಯಿತು. ಈ ಕಾರ್ಯಮದಲ್ಲಿ ಪ್ರಶಿಕ್ಷಣಾರ್ಥಿಗಳಾದ ಮೋನಿಶ ಮತ್ತು ಜ್ಞಾನಿತಾ ರವರು ನಿರೂಪಣೆ ಮಾಡಿದರು. ಕಾರ್ಯಕ್ರಮವು ಪ್ರಶಿಕ್ಷಣಾರ್ಥಿ ನಿವೇದಿತಾ ಮತ್ತು ತಂಡದವರಿಂದ ಪ್ರಾರ್ಥನೆ ಮೂಲಕ ನಡೆಯಿತು.





ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ಎಸ್ ಸುರೇಶ್ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನೂ ಸ್ವಾಗತಿಸಿದರು.

**ಉದ್ಘಾಟಕರ ನುಡಿ:**

**ಡಾ. ನಿಂಗಮ್ಮ ಸಿ ಬೆಟ್ಸೂರು ಡೀನ್, ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾಲಯ** ಇವರು ಗಣ್ಯರೊಡಗೂಡಿ ಜ್ಯೋತಿ ಬೆಳಗುವ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಮಾತನಾಡುತ್ತಾ ಕಲಿಕಾ ಕೌಶಲ್ಯಗಳು, ಜೀವನ ಕೌಶಲ್ಯಗಳು, ಸಾಕ್ಷರತೆ ಕೌಶಲ್ಯಗಳು ಹಾಗೂ ಹೇಗೆ ನಕಾರಾತ್ಮಕ ಸಮೂಹ ಮಾಧ್ಯಮಗಳಿಂದ ದೂರವಿರಬೇಕು ಹಾಗೂ ಇವರು ನಮ್ಯತೆ ಹೇಗೆ ಒಬ್ಬ ವಕ್ತಿಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ವಿಚಾರ ಸಂಕಿರಣ ಯಶಸ್ವಿಯಾಗಲೆಂದು ಶುಭ ಹಾರೈಸಿದರು.



**ಮುಖ್ಯ ಭಾಷಣಕಾರರ ನುಡಿಗಳು:-**




ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ಆಗಮಿಸಿದ **ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಇ.ಆರ್ ಎಕ್ಬೋಟೆ** ರವರು ಮಾತನಾಡುತ್ತಾ 2020 ರ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಂತೆ ತಿಳಿಸುತ್ತಾ ಇನ್ನಷ್ಟು ಬದಲಾವಣೆಯ ಅವಶ್ಯಕತೆ ಇದೆಯೆಂದು ಶಿಕ್ಷಕರಿಗೆ ವಿದ್ಯಾರ್ಥಿಗಳ ವರ್ತನೆಯನ್ನು ಅರ್ಥ ಮಾಡಿಕೊಳ್ಳಲು ಕೆಲವು ಮೂಲಭೂತ ಕೌಶಲ್ಯಗಳ ಅವಶ್ಯಕತೆಯಿದೆ ಎಂದು ತಿಳಿಸಿದರು.

**ಅತಿಥಿಗಳ ನುಡಿ:**




ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ **ಗೌರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಕಾಫಿ ಬೆಳೆಗಾರರಾದ ಶ್ರೀ ಬಿ.ಡಿ ಬಸವಣ್ಣ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಐ.ಆರ್ ಕುಮಾರಪ್ಪರವರು** ವಿಚಾರ ಸಂಕಿರಣದ ಕುರಿತಂತೆ ಮಾತನಾಡುತ್ತಾ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ನಂತರದಲ್ಲಿ ಇವರಿಗೂ ಗೌರವ ಸಮರ್ಪಣೆ ಮಾಡಲಾಯಿತು.

**ಅಧ್ಯಕ್ಷರ ನುಡಿ:**




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ **ಜೆಎಸ್‌ಎಸ್ ಮಹಾವಿದ್ಯಾಪೀಠದ, ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ ರಾಜಶೇಖರ್** ರವರು ಮಾತನಾಡುತ್ತಾ ವಿಚಾರ ಸಂಕಿರಣದ ಆಯೋಜನೆಯ ಉದ್ದೇಶವನ್ನು ತಿಳಿಸುತ್ತಾ, ನಮ್ಮ ಸಂಸ್ಥೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನೂ ಆತ್ಮೀಯವಾಗಿ ಶ್ರೀ ಮಠದ ಹಾಗೂ ಸಂಸ್ಥೆಯ ಪರವಾಗಿ ಸ್ವಾಗತಿಸುತ್ತಾ ಸಂಸ್ಥೆಯ ಕುರಿತಂತೆ ವಿವರವಾಗಿ ತಿಳಿಸಿದರು.

ಅಂತಿಮವಾಗಿ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ರವರು ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನೂ ವಂದಿಸಿದರು.

ಈ ಅಧಿವೇಶನದಲ್ಲಿ 12 ಗಂಟೆಗೆ ಗಣ್ಯರಿಗೆ ಮತ್ತು ಭಾಗವಹಿಸಿದವರಿಗೆ ಮಸಾಲ ಮಜ್ಜಿಗೆ ವಿತರಿಸಲಾಯಿತು.

**ತಾಂತ್ರಿಕ ಅವಧಿ – 1:**

ಡಾ. ಎನ್.ಎಸ್ ಪ್ರಹ್ಲಾದ, ನಿವೃತ್ತಿ ಪ್ರಾಧ್ಯಾಪಕರು, ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮೈಸೂರು, ಇವರು ಈ ಅಧಿವೇಶನದಲ್ಲಿ ಎಂಬ ವಿಷಯದ ಕುರಿತಂತೆ ವಿಚಾರ ಮಂಡಿಸುತ್ತಾ ವಿವಿಧ ಅಂಶಗಳು ಮತ್ತು ನಿಯಮಗಳ ಜೊತೆಗೆ ವ್ಯಕ್ತಿ ತನ್ನ ಜೀವನದಲ್ಲಿ ಸ್ವಯಂ ಪರಿಕಲ್ಪನೆ ಮತ್ತು ಆತ್ಮ ಗೌರವದಿಂದ ಹೇಗೆ ಬದುಕಬೇಕು ಎಂಬುದನ್ನು ತಿಳಿಸಿಕೊಟ್ಟರು.





ಸಮಯ 2:10 ಕ್ಕೆ ಊಟದ ವಿರಾಮ ನೀಡಲಾಯಿತು. ಭಾಗವಹಿಸಿದವರಿಗೆ ರುಚಿಕರವಾದ ದಕ್ಷಿಣ ಭಾರತ ಶೈಲಿಯ ಪ್ರಸಾದವನ್ನು ನೀಡಲಾಯಿತು.






**ತಾಂತ್ರಿಕ ಅವಧಿ – 2:**


ಊಟದ ವಿರಾಮದ ನಂತರ ತಾಂತ್ರಿಕ ಅಧಿವೇಶನವನದ ಎರಡನೇ ಹಂತವನ್ನು ಪ್ರಾರಂಭಿಸಲಾಯಿತು. ಅಲ್ಲಿ ಪ್ರಾಧ್ಯಾಪಕರು ಜಿ.ಆರ್ ಅಂಗಡಿ, ಶಾಲಾ ಶಿಕ್ಷಣ ಸಂಸ್ಥೆ, ಕೇಂದ್ರೀಯ ವಿಶ್ವವಿದ್ಯಾಲಯ, ಗುಜರಾತ್, ಇವರು 21 ನೇ ಶತಮಾನದ ಕಲಿಕಾರ್ಥಿಯ ಪ್ರತಿಭೆಯನ್ನು ಪೋಷಿಸುವಲ್ಲಿ ಶಿಕ್ಷಕರ ಶಿಕ್ಷಣದ ದೃಷ್ಟಿಕೋನದ ಪಾತ್ರ ಈ ವಿಷಯದ ಬಗ್ಗೆ ವಿಡೀಯೋ ಪ್ರದರ್ಶಿಸಿದರು. ನಂತರ ಪತ್ರಿಕಾ ಮಂಡನೆಯ ತಾಂತ್ರಿಕ ಅಧಿವೇಶನವನ್ನು ಗಣಕಯಂತ್ರ ಸೌಲಭ್ಯವುಳ್ಳ ಕೊಠಡಿಗಳಲ್ಲಿ ನಡೆಸಲಾಯಿತು ಮತ್ತು ಭಾಗವಹಿಸಿದ ಸಂಶೋಧನಾರ್ಥಿಗಳು ಪ್ರತಿನಿಧಿಗಳೂ ತಮ್ಮದೇ ಆದ ಆಸಕ್ತಿವುಳ್ಳ ಸಂಶೋಧನ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಮಟ್ಟದ ಪ್ರಬಂಧಗಳನ್ನು ಮಂಡಿಸಿದರು.




**ತಾಂತ್ರಿಕ ಅವಧಿ – 3:**

ಮಧ್ಯಾಹ್ನ ನಡೆದ ಪತ್ರಿಕಾ ವಿಷಯ ಮಂಡನೆ ಸಂದರ್ಭದಲ್ಲಿ ಒಟ್ಟು 4 ಕೊಠಡಿಗಳನ್ನು ವ್ಯವಸ್ಥೆ ಮಾಡಲಾಗಿತ್ತು ಹಾಗೂ ಪ್ರತಿ ಕೊಠಡಿಗೆ ಒಬ್ಬರಂತೆ ಚೇರ್ಮನ್, ರ್ಯಾಪೋಟಿಯರ್ ಹಾಗೂ 20 ಪ್ರಶಿಕ್ಷಣಾರ್ಥಿಗಳನ್ನು ವೀಕ್ಷಕರಾಗಿ ಆಯೋಜಿಸಲಾಗಿತ್ತು. ಒಟ್ಟು ವಿಷಯ ಮಂಡನೆ ಮಾಡಲು ನೊಂದಣಿ ಮಾಡಿಕೊಂಡಿದ್ದ 84 ಪ್ರತಿನಿಧಿಗಳು ನೇರ ಭಾಗವಹಿಸಿ ವಿಷಯ ಮಂಡನೆ ಮಾಡಿದರು ಹಾಗೂ ಹೊರ ಪ್ರದೇಶದಿಂದ ಬರಲಾಗದಿದ್ದವರು ಗೂಗಲ್ ಮೀಟ್ ಮೂಲಕ 14 ಪ್ರತಿನಿಧಿಗಳು ವಿಷಯ ಮಂಡನೆ ಮಾಡಿದರು.




ಪತ್ರಿಕಾ ವಿಷಯ ಮಂಡನೆ ಮುಗಿದ ನಂತರ ವಿರಾಮದೊಂದಿಗೆ ಚಹಾ ಹಾಗು ಸ್ನ್ಯಾಕ್ಸ್ ನೀಡಲಾಗಿತು.

**ಸಮಾರೋಪ ಸಮಾರಂಭ:-**

ಸಂಜೆ 5.30ಕ್ಕೆ ಪ್ರಶಿಕ್ಷಣಾರ್ಥಿ ಸಂಗೀತ ಎಂ ಹಾಗೂ ತಂಡದವರು ಪ್ರಾರ್ಥನೆಯ ಮೂಲಕ ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಪ್ರತಿನಿಧಿಗಳು ಹಾಗೂ ಗಣ್ಯರನ್ನು ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ ಪ್ರಭುಸ್ವಾಮಿರವರು ಸ್ವಾಗತಿಸಿದರು.

**ಸಮಾರೋಪ ನುಡಿ:-**




ಸ್ವಾಗತ ಕಾರ್ಯಕ್ರಮದ ನಂತರ ವಿಶೇಷ ಅತಿಥಿಗಳಾಗಿ ಆಗಮಿಸಿದ **ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯ ರಿಜಿಸ್ಟ್ರಾರ್ (ಕೆ.ಎಸ್.ಒ.ಯೂ) ಡಾ. ಕೆ. ಬಿ ಪ್ರವೀಣ್** ರವರು ಮಾತನಾಡುತ್ತಾ. ಹಾರ್ವರ್ಡ್ ಗಾರ್ಡನರ್ಸ್ ರವರ ಬಹುಕಾರಕ ಬುದ್ಧಿಶಕ್ತಿ ಸಿದ್ಧಾಂತದ ಬಗ್ಗೆ ಸವಿಸ್ತಾರವಾಗಿ ವಿವಿಧ ರೀತಿಯ ತಾರ್ಕಿಕ ಆಧ್ಯಾತ್ಮಿಕ, ನೈತಿಕ ಈಗೆ ಹಲವು ವಿಷಯಗಳ ಬಗ್ಗೆ ವಿವರಿಸಿದರು.

**ಅತಿಥಿಗಳ ನುಡಿ:-**




ನಂತರದಲ್ಲಿ **ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಮುಖ್ಯಸ್ಥರು ಹಾಗೂ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿಯಾದ ಡಾ. ಜಗನ್ನಾಥ್ ಕೆ ಡಾಂಗೆ** ರವರು ಮಾತನಾಡುತ್ತಾ ನಮ್ಮ ವೃತ್ತಿ ಬದುಕಿನಲ್ಲಿ ನಮಗೆ ಮಾರ್ಗದರ್ಶನ ಮಾಡಿದ ಶಿಕ್ಷಕರುಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸಿ ಅವರ ಒಳ್ಳೆಯ ಗುಣಗಳನ್ನು ನಾವು ಅಳವಡಿಸಿಕೊಂಡು ಉತ್ತಮ ಹಾದಿಯಲ್ಲಿ ಬದುಕುತಿದ್ದೇವೆ ಎಂಬುದನ್ನು ತಿಳಿಸಬೇಕು ಹಾಗೂ ನಮ್ಮ ವಿದ್ಯಾರ್ಥಿಗಳು ಸಹ ನಮ್ಮ ಉತ್ತಮ ಕಾರ್ಯಗಳನ್ನು ಗುರುತಿಸಿ ಅವರ ವಿದ್ಯಾರ್ಥಿಗಳಿಗೆ ಪರಿಚಯಿಸುವ ಕಾರ್ಯ ಮಾಡುತ್ತಾ ಎಲ್ಲರ ನೆನಪು ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ ಎಂದು ತಿಳಿಸುತ್ತಾ, ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದವರನ್ನೆಲ್ಲಾ ಅಭಿನಂದಿಸಿದರು.

**ಅತಿಥಿಗಳ ನುಡಿ:-**




ನಂತರದಲ್ಲಿ ಎಪಿಎಂಸಿಯ **ಮಾಜಿ ಅಧ್ಯಕ್ಷರು ಹಾಗೂ ಸಂಸ್ಥೆಯ ಹಿತೈಷಿಗಳು ಆದ ಕೌಡಳ್ಳಿ ಗ್ರಾಮದ ಕೆ. ಬಿ ಲೋಹಿತ್** ರವರು ಮಾತನಾಡುತ್ತಾ, ನಮ್ಮಗಳ ಬದುಕಿನಲ್ಲಿ ನಾವು ಯಾವುದೇ ಹಂತಕ್ಕೆ ಬೆಳದರೂ ಅದಕ್ಕೆ ಮುಖ್ಯ ಕಾರಣ ನಮ್ಮ ತಂದೆ-ತಾಯಿ ಹಾಗೂ ಗುರುಗಳು ನಾವೆಲ್ಲರೂ ಅವರನ್ನು ಗೌರವಯುತವಾಗಿ ನೋಡಿಕೊಳ್ಳುವ ಕಾರ್ಯವಾಗಬೇಕೆನ್ನುತ್ತಾ ಕಾಲೇಜಿನಲ್ಲಿ ಈ ರೀತಿಯ ವಿಚಾರ ಸಂಕಿರಣಗಳು ನಡೆಯುವುದರಿಂದ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲವಾಗುತ್ತದೆಂದು ತಿಳಿಸಿದರು. ನಂತರದಲ್ಲಿ ಕೆ. ಬಿ ಲೋಹಿತ್ ರವರಿಗೆ ಗೌರವ ಸಮರ್ಪಣೆ ಮಾಡಲಾಯಿತು.

ಇಂದು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದ **ಸಂಪೂರ್ಣ ವರದಿಯನ್ನು ಅಂತಿಮ ವರ್ಷದ ಪ್ರಶಿಕ್ಷಣಾರ್ಥಿ ಕುಮಾರಿ ಪ್ರೀತು ಹೆಚ್.ಎಂ** ರವರು ಪ್ರಸ್ತುತಪಡಿಸಿದರು.

**ಉತ್ತಮವಾಗಿ ವಿಷಯ ಮಂಡನೆ ಮಾಡಿದ ಪ್ರತಿನಿಧಿಗಳು:-**

ಇಂದು ನಡೆದ ವಿಚಾರ ಸಂಕಿರಣದಲ್ಲಿ ವಿಷಯ ಮಂಡನೆ ಮಾಡಿದ ಪ್ರತಿನಿಧಿಗಳಲ್ಲಿ ಉತ್ತಮವಾಗಿ ವಿಷಯ ಮಂಡನೆ ಮಾಡಿದ ಶ್ರೀ ಚಂದ್ರಕುಮಾರ್, ಶ್ರೀಮತಿ ಶೀತಲ್ ಪಿಂಟೋ ಹಾಗೂ ಶ್ರೀ ಜಗದೀಶ್ ರವರಿಗೆ ಅಭಿನಂದಿಸಲಾಯಿತು. ಹಾಗೂ ಪ್ರಶಸ್ತಿ ವಿತರಿಸಲಾಯಿತು.










ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಸುರೇಶ್ ಎನ್.ಎಸ್ ರವರು ಮಾತನಾಡುತ್ತಾ ರಾಷ್ಟ್ರೀಯ ವಿಚಾರ ಸಂಕಿರಣ ಶಿಕ್ಷಕರಾದವರೆಲ್ಲರೂ ನಿಷ್ಕಾಮಕರ್ಮದ ಪರಿಕಲ್ಪನೆಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಬೇಕು. ನಾವೇನು ಮಾಡಿದ್ದೇವೆ ಎಂಬುದನ್ನು ಎಲ್ಲೂ ವ್ಯಕ್ತಪಡಿಸುವ ಅವಶ್ಯಕತೆಯಿಲ್ಲ ಹಾಗೂ ನಾವು ಮಾಡಿದ್ದೇನೆಂದು ಹೇಳಿಕೊಂಡು ಒಡಾಡುವ ಕಾರ್ಯ ನಡೆಯಕೂಡದೆಂದು ತಿಳಿಸುತ್ತಾ. ರಾಷ್ಟ್ರೀಯ ವಿಚಾರ ಸಂಕಿರಣ ನಮ್ಮ ಕಾಲೇಜಿನಲ್ಲಿ ನಡೆಯಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಅಂತಿಮವಾಗಿ ಪ್ರಾಂಶುಪಾಲರಾದ ಡಾ. ಸುರೇಶ್ ಎನ್.ಎಸ್ ರವರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಗಣ್ಯರಿಗೆ, ಅತಿಥಿಗಳಿಗೆ, ವಿಚಾರ ಮಂಡಿಸಲು ವಿವಿದೆಡೆಯಿಂದ ಆಗಮಿಸಿದ ಪ್ರತಿನಿಧಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಪ್ರಶಿಕ್ಷಣಾರ್ಥಿಗಳಿಗೆ ವಂದಿಸಿದರು.

ಸಮಾರೋಪ ಸಮಾರಂಭ ಮುಕ್ತಾಯವಾದ ನಂತರ ವಿಷಯ ಮಂಡನೆ ಮಾಡಿದ ಪ್ರತಿನಿಧಿಗಳಿಗೆ ಹಾಗೂ ವಿಚಾರ ಸಂಕಿರಣಕ್ಕೆ ನೋಂದಣಿ ಮಾಡಿದ ಎಲ್ಲರಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist